# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 31.07.2010**

ಕೆಂಗೇರಿ ಸಮೀಪ ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿ ವೃಷಭಾವತಿ ನದಿಗೆ ಕಲ್ಲು, ಮಣ್ಣು ಮತ್ತು ಘನತ್ಯಾಜ್ಯ ಸುರಿದು ಒತ್ತುವರಿ ಮಾಡಲಾಗಿದೆ ಎಂದು ವರದಿಯಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಆಯುಕ್ತರು ಇಂದು ಸ್ಥಳ ಪರಿಶೀಲಿಸಿ ಮಾಡಿ, ಒತ್ತುವರಿ ತೆರವುಗೊಳಿಸುವ ಕಾರ್ಯ ಕೂಡಲೇ ಪ್ರಾರಂಭಿಸಲು ಮತ್ತು ಒತ್ತುವರಿ ಮಾಡಿದಂತಹ ಖಾಸಗಿ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ) ರವರಿಗೆ ಸೂಚಿಸಿದರು.

ಪಾಲಿಕೆಯ ಆಯುಕ್ತರು ಇಂದು ರಾಜರಾಜೇಶ್ವರಿನಗರ ವಲಯದ ತಪಾಸಣೆ ಕೈಗೊಂಡು ಹಲಿಗೆ ವಡೆಯನ ಕೆರೆಗೆ ಭೇಟಿ ನೀಡಿ, ಈ ಕೆರೆಯು ಬಹಳ ಹಳೆಯ ಇತಿಹಾಸಯುಳ್ಳಂತಹ ಕೆರೆಯಾಗಿದ್ದು, ಇಲ್ಲಿ ಹಲವಾರು ಜಾತಿಯ ಪಕ್ಷಿಗಳು ವಾಸವಾಗಿರುವುದರಿಂದ ಸಾರ್ವಜನಿಕರ ವಿಹಾರಕ್ಕಾಗಿ ಇದೊಂದು ಉತ್ತಮ ತಾಣವನ್ನಾಗಿ ಅಭಿವೃದ್ಧಿಪಡಿಸುವ ಅವಶ್ಯಕತೆ ಇದೆ. ಆದ್ದರಿಂದ ಈ ಕೆರೆಯು ಸಂಪೂರ್ಣ ಅಭಿವೃದ್ಧಿಗೆ ಯೋಜನಾ ವರದಿಯನ್ನು ಸಿದ್ಧಪಡಿಸಲು ಮುಖ್ಯ ಅಭಿಯಂತರರು (ಕೆರೆಗಳು) ರವರಿಗೆ ಸೂಚನೆ ನೀಡಿದರು.

ತದನಂತರ ಕೆಂಗೇರಿ ಉಪನಗರ ಮುಖ್ಯರಸ್ತೆ, ಭುವನೇಶ್ವರಿನಗರದ ಮುಖ್ಯರಸ್ತೆಗಳಲ್ಲಿ ವಾರ್ಡ್ ಅಭಿಯಂತರರು / ಆರೋಗ್ಯ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾದ ತೀವ್ರ ಸ್ವಚ್ಛತಾ ಆಂದೋಲನಕ್ಕೆ ಚಾಲನೆ ನೀಡಿದರು. ಪ್ರತಿವಾರ ಈ ರೀತಿ ಕಾರ್ಯಕ್ರಮ ಎಲ್ಲಾ ವಾರ್ಡ್‌ನಲ್ಲಿ ಬರುವ ಪ್ರಮುಖ ರಸ್ತೆಗಳಲ್ಲಿ ತಪ್ಪದೇ ಹಮ್ಮಿಕೊಳ್ಳಲು ಅಧಿಕಾರಿಗಳಿಗೆ ತಿಳಿಸಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**